O.S. No.204/2018 P.W. 1 Dated :10-07-2024.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು: ಶ್ರೀ. ಕೆ.ಎನ್. ವಕೀಲರಿಂದಃ

ನಮ್ಮ ಕುಟುಂಬದಲ್ಲಿ ನಾವು ಹಿಸ್ಸೆ ಮಾಡಿಕೊಂಡು ಹಿಸ್ಸೆಗಳ ಆಧಾರದ ಮೇಲೆ ಪ್ರತ್ಯೇಕವಾಗಿ ವಾಸವಾಗಿರುತ್ತೇವೆ. ಹಿಸ್ಸೆಯಾದ ನಂತರ ನನ್ನ ತಂದೆ ಶಂಭುಗೌಡರವರು ನನ್ನ ಜೊತೆ ವಾಸವಾಗಿದ್ದರು. ನನ್ನ ಅಕ್ಕ ಲೋಲಾಕ್ಷಿಯನ್ನು ಹಿಡುವನಹಳ್ಳಿಗೆ ವಿವಾಹ ಮಾಡಿಕೊಡಲಾಗಿರುತ್ತದೆ. ಅವರಿಗೆ ಶೋಭ ಮತ್ತು ರಾಜ್ ಕುಮಾರ್ ಎಂಬ ಇಬ್ಬರು ಮಕ್ಕಳು. ಲೋಲಾಕ್ಷಿಯವರ ಗಂಡ ಯಾವಾಗ ಮರಣ ಹೊಂದಿದರು ಎಂದು ನನಗೆ ಗೊತ್ತಿಲ್ಲ. ಲೋಲಾಕ್ಷಿಯವರ ಗಂಡ ಮರಣ ಹೊಂದಿದ ನಂತರ ನನ್ನ ತಾಯಿ ಈರಮ್ಮನವರು ಲೋಲಾಕ್ಷಿಯವರ ಮನೆಯಲ್ಲಿ ವಾಸ ಮಾಡತೊಡಗಿದರು ಎಂದರೆ ಸರಿಯಲ್ಲ. ವಿಭಾಗದಲ್ಲಿ ನಮ್ಮ ತಾಯಿಗೆ 8-00 ಎಕರೆ ಜಮೀನು ಸೇರಿತ್ತು. ನನ್ನ ತಾಯಿ ಅವರ ಜೀವಿತಾವಧಿಯಲ್ಲಿ ದಿಃ18-10-2001 ರಂದು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನೊಂದಾಯಿತ ವಿಲ್ ವಿಲ್ಲನ್ನು ಬರೆದಿರುತ್ತಾರೆ ಎಂದರೆ ಸರಿ. ನಾನು ನನ್ನ ತಾಯಿಯ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳದ ಕಾರಣ 2001 ನೇ ಇಸವಿಯಲ್ಲಿ ಬರೆದಂತಹ ವಿಲ್ಲನ್ನು ದಿಃ24-03-2003 ರಂದು ನೊಂದಾಯಿತ ಕಚೇರಿಯಲ್ಲಿ ರದ್ದುಪಡಿಸಿರುತ್ತಾರೆ ಎಂದರೆ ಸರಿ , ಸಾಕ್ಷಿಯು ಮುಂದುವರಿದು ಅದು ನನ್ನ ತಾಯಿಯವರಿಗೆ ಸಂಬಂಧಿಸಿದ ವಿಚಾರ ಎಂದು ನುಡಿಯುತ್ತಾರೆ. ನನ್ನ ತಾಯಿಯ ಯೋಗಕ್ಷೇಮವನ್ನು ನಾನು ನೋಡಿಕೊಳ್ಳದ ಕಾರಣ ನನ್ನ ತಾಯಿ 1 ನೇ ಪ್ರತಿವಾದಿಯ ತಾಯಿಯಾದ ಲೋಲಾಕ್ಷಿಯವರ ಬಳಿ ವಾಸ ಮಾಡತೊಡಗಿದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ವಿವಾಹವನ್ನು ನನ್ನ ತಾಯಿ ಈರಮ್ಮ ಮತ್ತು ಲೋಲಾಕ್ಷಿಯವರು ಒಟ್ಟಾಗಿ ಸೇರಿ ನೆರವೇರಿಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಲೋಲಾಕ್ಷಿಯವರು ನೆರವೇರಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ವಿವಾಹವಾದ ನಂತರ ನನ್ನ ತಾಯಿ ಈರಮ್ಮನವರು 1 ನೇ ಪ್ರತಿವಾದಿ ಮನೆಯಲ್ಲಿ ವಾಸಿಸುತ್ತಿದ್ದರು ಎಂದರೆ

ಸರಿಯಲ್ಲ. 1 ನೇ ಪ್ರತಿವಾದಿಯ ವಿವಾಹವಾದ ನಂತರ ನನ್ನ ತಾಯಿ ಈರಮ್ಮನವರು ಪ್ರತಿವಾದಿಯ ಮನೆಯಲ್ಲಿ ವಾಸಿಸುತ್ತಿದ್ದ ಕಾರಣ 1 ನೇ ಪ್ರತಿವಾದಿ ಅವರ ಯೋಗಕ್ಷೇಮವನ್ನು ಚನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ನನ್ನ ತಾಯಿ ನಮ್ಮ ಮನೆಯಲ್ಲೇ ವಾಸಿಸುತ್ತಿದ್ದರು ಎಂದು ನುಡಿಯುತ್ತಾರೆ. ದಿಃ08-12-2008 ರಂದು ನನ್ನ ತಾಯಿ ಈರಮ್ಮನವರು 1 ನೇ ಪ್ರತಿವಾದಿಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನೊಂದಾಯಿತ ವಿಲ್ಲನ್ನು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಲ್ಲನ್ನು ಲಕ್ಷ್ಮಿಕಾಂತ್ , ವಕೀಲರು ಬರೆದಿದ್ದು , ಅದಕ್ಕೆ ಇಬ್ಬರು ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವೆ ಹೂಡಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ನನ್ನ ತಾಯಿ ಮರಣ ಹೊಂದಿದ ನಂತರ 1 ನೇ ಪ್ರತಿವಾದಿಯು ದಾವಾ ಸ್ವತ್ತಿನ ಖಾತೆ ವರ್ಗಾಯಿಸಿಕೊಳ್ಳಲು ಅರ್ಜಿ ಸಲ್ಲಿಸಿದಾಗ ನನ್ನ ಗಮನಕ್ಕೆ ಬಂದಿದ್ದು , ಆನಂತರ ನಾನು ನಮ್ಮ ವಕೀಲರಿಗೆ ಮಾಹಿತಿ ನೀಡಿ ದಾವೆ ಹೂಡಿರುತ್ತೇನೆ. ಆ ವೇಳೆಯಲ್ಲಿಯೇ ನನ್ನ ತಾಯಿ 1 ನೇ ಪ್ರತಿವಾದಿಯ ಹೆಸರಿಗೆ ವಿಲ್ ಬರೆದಿರುವ ವಿಚಾರ ನನಗೆ ತಿಳಿದಿರುತ್ತದೆ. 2010 ನೇ ಇಸವಿಯಲ್ಲಿ ಈರಮ್ಮನವರ ಎಡಗೈಗೆ ಪಾರ್ಶ್ವವಾಯುವಾಗಿತ್ತು. ಆ ವೇಳೆಯಲ್ಲಿ 1 ನೇ ಪ್ರತಿವಾದಿಯು ತನ್ನ ಸ್ವಂತ ಖರ್ಚಿನಿಂದ ಈರಮ್ಮನವರಿಗೆ ಚಿಕಿತ್ಸೆ ಕೊಡಿಸಿದರು ಎಂದರೆ ಸರಿಯಲ್ಲ. ಈರಮ್ಮನವರು ಪಾರ್ಶ್ವವಾಯುವಿಗೆ ಚಿಕಿತ್ಸೆ ಪಡೆಯುತ್ತಿರುವಾಗ ಸುಮಾರು ಒಂದು , ಒಂದೂವರೆ ವರ್ಷಗಳ ನಂತರ ಪುನಃ ಅವರ ಮೆದುಳಿಗೆ ಪಾರ್ಶ್ವವಾಯು ಉಂಟಾಯಿತು ಎಂದರೆ ಸರಿಯಲ್ಲ. ಈರಮ್ಮನವರ ಮೆದುಳಿಗೆ ಪಾರ್ಶ್ವವಾಯು ಹೊಡೆದ ನಂತರ ಅವರು ಮಾನಸಿಕವಾಗಿ ಅಸ್ವಸ್ಥರಾಗಿದ್ದರು ಎಂದರೆ ಸರಿಯಲ್ಲ. ಈರಮ್ಮನವರು ಅವರು ಮರಣ ಹೊಂದುವವರೆಗೂ ಅವರು ಪಾರ್ಶ್ವವಾಯುವಿನಿಂದ ಗುಣಮುಖರಾಗಿರಲಿಲ್ಲ ಎಂದರೆ ಸಾಕ್ಷಿಯು ಅವರಿಗೆ ಎಡಗೈಗೆ ಮಾತ್ರ ಪಾರ್ಶ್ವವಾಯುವಾಗಿತ್ತು ಎಂದು ನುಡಿಯುತ್ತಾರೆ.

ದಿಃ13-04-2013 ರ ವಿಲ್ಲನ್ನು ರದ್ದುಪಡಿಸುವಂತೆ ಕೋರಿ ನಾನು ದಾವೆ ಹೂಡಿರುತ್ತೇನೆ. 1 ನೇ ಪ್ರತಿವಾದಿಯು ಬಲತ್ಕಾರದಿಂದ ವಿಲ್ ಬರೆಸಿಕೊಂಡಿರುವ ವಿಚಾರ ನನ್ನ ತಾಯಿಯವರಿಂದ ನನಗೆ ತಿಳಿಯಿತು. ಬಲತ್ಕಾರದಿಂದ ವಿಲ್ಲನ್ನು ಪಡೆದುಕೊಂಡಿರುವ ಬಗ್ಗೆ ನಾನು ಪೋಲೀಸರಿಗೆ ದೂರು

ದಾಖಲಿಸಿರುವುದಿಲ್ಲ , ನಮ್ಮ ಕುಟುಂಬದಲ್ಲಿ ಆ ಬಗ್ಗೆ ಚರ್ಚೆ ಮಾಡಿರುತ್ತೇವೆ. ಆ ವೇಳೆಯಲ್ಲಿ ನನಗೆ 1 ನೇ ಪ್ರತಿವಾದಿ ಮತ್ತು ವಿಲ್ಲಿನಲ್ಲಿರುವ ಸಾಕ್ಷಿದಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ನನ್ನ ದಾವೆಯಲ್ಲಿ ದಿಃ30-01-2018 ರ ಮರಣಶಾಸನದಂತೆ ನಾನೇ ದಾವಾ ಸ್ವತ್ತಿನ ಮಾಲೀಕನೆಂದು ಘೋಷಿಸುವಂತೆ ದಾವೆ ಹೂಡಿರುತ್ತೇನೆ ಎಂದರೆ ಸರಿ . ದಿಃ30-01-2018 ರ ವಿಲ್ಲನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 2010 ನೇ ಇಸವಿಯಲ್ಲಿ ಈರಮ್ಮನವರಿಗೆ ಪಾರ್ಶ್ವವಾಯುವಾಗಿದ್ದ ಕಾರಣ ಅವರು ನಡೆದಾಡುತ್ತಿರಲಿಲ್ಲ , 2018 ನೇ ಇಸವಿಯಲ್ಲಿ ಅವರನ್ನು ಯಾರು ನೊಂದಣಾ ಕಚೇರಿಗೆ ಕರೆದುಕೊಂಡು ಹೋದರು ಎಂದರೆ ಸಾಕ್ಷಿಯು ನಾನೇ ನಮ್ಮ ಕಾರಿನಲ್ಲಿ ನಮ್ಮ ತಾಯಿಯನ್ನು ಕರೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಬೆಳಿಗ್ಗೆ ಸುಮಾರು 10-30 ರ ಸಮಯದಲ್ಲಿ ನಾನು ನನ್ನ ತಾಯಿ ಹಾಗೂ ಇಬ್ಬರು ಸಾಕ್ಷಿದಾರರು ಸುನಿಲ್ ಎಂಬ ನೋಟರಿ ವಕೀಲರವರ ಕಚೇರಿಗೆ ಹೋಗಿದ್ದೆವು. ಅವರ ಕಚೇರಿ 1 ನೇ ಮಹಡಿಯಲ್ಲಿದೆ ಎಂದರೆ ಸರಿ . ಆ ವೇಳೆಯಲ್ಲಿ ವಕೀಲರ ಕಚೇರಿಯಲ್ಲಿ ಬೇರೆ 3 ಜನ ಕಕ್ಷಿದಾರರು ಮತ್ತು ಒಬ್ಬ ಬೆರಳಚ್ಚುಗಾರರು ಸಹಾ ಇದ್ದರು. ವಕೀಲರ ಕಚೇರಿಯಲ್ಲಿ ಮಾಹಿತಿಯನ್ನು ನಮ್ಮ ತಾಯಿಯವರು ನೀಡಿದರು ನಾನು ದಾಖಲೆಯನ್ನು ನೀಡಿದೆನು. ಆ ದಿನ ಪಹಣಿ, ಆಧಾರ ಕಾರ್ಡ್ , ಚಕ್ಕುಬಂದಿ ಹಾಗೂ ಒಂದು ನೊಂದಾಯಿತ ವಿಲ್ಲನ್ನು ವಕೀಲರಿಗೆ ನೀಡಿದೆನು. ನೊಂದಾಯಿತ ವಿಲ್ಲನ್ನು ವಕೀಲರು ಪರಿಶೀಲನೆ ಮಾಡಿದ್ದರೆ ಎಂದರೆ ಸಾಕ್ಷಿಯು ಪರಿಶೀಲನೆ ಮಾಡಿದರು ಎಂದು ನುಡಿಯುತ್ತಾರೆ. ಸದರಿ ನೊಂದಾಯಿತ ವಿಲ್ಲನ್ನು ನೊಂದಣಾ ಕಚೇರಿಯಲ್ಲಿ ರದ್ದುಪಡಿಸಿಕೊಳ್ಳಿ ಎಂದು ತಿಳಿಸಿದ್ದರೇ ಎಂದರೆ ಸಾಕ್ಷಿಯು ಆ ಬಗ್ಗೆ ನಮಗೆ ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸುನಿಲ್ ವಕೀಲರ ಕಚೇರಿಯು ನೊಂದಣಾ ಕಚೇರಿಯಿಂದ ಸುಮಾರು 500 ಮೀಟರ್ ದೂರದಲ್ಲಿದೆ ಎಂದರೆ ಸರಿ . ಈ ಮೊದಲು ಇದ್ದಂತಹ ನೊಂದಾಯಿತ ವಿಲ್ಲನ್ನು ನಾನು ಕಾನೂನು ರೀತ್ಯಾ ರದ್ದುಪಡಿಸುವ ಪ್ರಯತ್ನ ಮಾಡಿರುವುದಿಲ್ಲ. ನಮ್ಮ ತಾಯಿಯಿಂದ ಮಾಹಿತಿ ಪಡೆದು ವಕೀಲರು ಆನಂತರ ಮರಣ ಪತ್ರವನ್ನು ತಯಾರಿಸಿದರು. ವಕೀಲರ ಕಚೇರಿಯಲ್ಲಿದ್ದಂತಹ ಬೆರಳಚ್ಚುಗಾರರ ಮಾಹಿತಿಯನ್ನು ನಾನು ತಿಳಿದುಕೊಂಡಿರುವುದಿಲ್ಲ. ವಿಲ್ಲಿನಲ್ಲಿ

ಬೆರಳಚ್ಚುಗಾರರ ವಿವರ ಹಾಗೂ ಸಹಿ ಇರುವುದನ್ನು ನಾನು ನೋಡಿರುವುದಿಲ್ಲ. ವಿಲ್ಲನ್ನು ತಯಾರಿಸುವ ವೇಳೆಯಲ್ಲಿ ನನ್ನ ತಾಯಿ ಈರಮ್ಮನವರ ವೈದ್ಯಕೀಯ ಪ್ರಮಾಣ ಪತ್ರವನ್ನು ಹಾಜರುಪಡಿಸಿ ಎಂದು ವಕೀಲರು ನನಗೆ ಮಾಹಿತಿ ನೀಡಿರಲಿಲ್ಲ . ಆ ದಿನ 11-30 ರ ವೇಳೆಗೆ ವಿಲ್ಲನ್ನು ತಯಾರಿಸಲಾಗಿತ್ತು. ವಿಲ್ಲನ್ನು ತಯಾರಿಸಲು ವಕೀಲರೇ ದಸ್ತಾವೇಜು ಕಾಗದ ಪತ್ರ ವನ್ನು ತರಿಸಿದರು. ಎಷ್ಟು ರೂ.ಗಳ ಸ್ಟಾಂಪ್ ಪೇಪರ್ ನಲ್ಲಿ ವಿಲ್ಲನ್ನು ತಯಾರಿಸಲಾಗಿತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ನನ್ನ ತಾಯಿ ಈರಮ್ಮನವರು ವಿಲ್ಲಿಗೆ ತನ್ನ ಬಲಗೈ ಹೆಬ್ಬೆರಳ ಗುರುತನ್ನು ಹಾಕಿದರು ಅದನ್ನು ನಾನು ಸ್ವತಃ ನೋಡಿರುತ್ತೇನೆ. ಈರಮ್ಮನವರು ಆರೋಗ್ಯವಾಗಿದ್ದು , ಅವರೇ ಸ್ವತಃ ತಮ್ಮ ಬಲಗೈ ಹೆಬ್ಬೆರಳ ಗುರುತನ್ನು ಹಾಕಿದ್ದಲ್ಲಿ ಅದು ಸ್ಪಷ್ಟವಾಗಿ ಇರುತ್ತಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-9 ರಲ್ಲಿ ಈರಮ್ಮನವರ ಬಲಗೈ ಹೆಬ್ಬೆರಳ ಗುರುತು ಕಂಡುಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-9 ರಲ್ಲಿನ ಬಲಗೈ ಹಬ್ಬೆರಳಿನ ಗುರುತಿನಲ್ಲಿ ರೇಖೆಗಳು ಒಂದಕ್ಕೊಂದು ಮಿಶ್ರಣವಾದಂತೆ ಕಂಡುಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-9 ರಲ್ಲಿನ ಹೆಬ್ಬೆರಳಿನ ಗುರುತು ಈರಮ್ಮನವ ರದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು , ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.